

ಅಬ್ಬಾಸ್ ಮೇಲಿನಮನಿ

# ಬದುಕು ಮತ್ತು ಬಾವುಟ

ಜೀವಪುರ ಮೂಲತಃ ಒಂದು ಗ್ರಾಮ. ಕಾಲಾಂತರದಲ್ಲಿ ಅದು ಪಟ್ಟಣದ ಸ್ವರೂಪ ತಾಳಿತು. ಪಟ್ಟಣವೆಂದರೆ ದೊಡ್ಡದು ಎಂದುಕೊಳ್ಳುವ ಹಾಗಿಲ್ಲ. ಅಧಿಕಾರ ವಿಕೇಂದ್ರೀಕರಣದ ಪ್ರಭಾವದಿಂದ ಊರಿಗೆ ಸರಕಾರದ ಅನೇಕ ಸೌಲಭ್ಯಗಳು ಹರಿದು ಬಂದವು. ಶಾಲೆ, ಕಾಲೇಜು, ಆಸ್ಪತ್ರೆ, ಬ್ಯಾಂಕು, ಟ್ರಜರಿ, ನಾಡ ಕಚೇರಿ, ಗ್ರಂಥಾಲಯಗಳು ಕಾಣಿಸಿದವು. ಹೊರಗಿನಿಂದ ಸರಕಾರಿ ನೌಕರರು ಬಂದರು. ಜನವಸತಿ ಸಾಂದ್ರಗೊಂಡಿತು. ಊರು ಬೆಳೆಯಲು ಇದು ಕಾರಣವಾಯಿತು. ಮನೆಗಳು ಹೆಚ್ಚಾದವು.

ಹಾಗೆ ನೋಡಿದರೆ ಊರಿಗೆ ವಿಸ್ತಾರವಾದ ಬಯಲೇನೂ ಇರಲಿಲ್ಲ. ಅರ್ಧದಷ್ಟು ಊರನ್ನು ಗುಡ್ಡ ಆವರಿಸಿಕೊಂಡರೆ, ಅದರ ವಿರುದ್ಧ ದಿಕ್ಕಿಗೆ ಹಳ್ಳವೊಂದು ಉದ್ದಕ್ಕೂ ಚಾಚಿಕೊಂಡಿತ್ತು. ಮಳೆಯಾದರೆ ತುಂಬಿ ಹರಿದು ವರ್ಷಾನುಗಟ್ಟಲೇ ಒಣಗಿಯೇ ಇರುತ್ತಿದ್ದ ಹಳ್ಳದ ದಂಡೆಯನ್ನು ಜನ ಬೇಕಾಬಿಟ್ಟಿಯಾಗಿ ಆಕ್ರಮಿಸಿಕೊಂಡು, ಅಲ್ಲೂ ಗುಡಿಸಲು, ಅಂಗಡಿ, ಮುಂಗಟ್ಟುಗಳನ್ನು ರಸ್ತೆಗೆ ಹೊಂದಿಕೊಡಂತೆ ನಿರ್ಮಿಸಿಕೊಂಡು ತಮ್ಮ ಬದುಕು, ವ್ಯವಹಾರಗಳಿಗೆ ದಾರಿಕಂಡುಕೊಂಡಿದ್ದರು. ಇವೆರಡರ ನಡುವೆ ಎರಡು ಮುಖ್ಯ ಬೀದಿಗಳು ಅವುಗಳಿಗೆ ತಾಕಿಕೊಂಡಂತೆ ಒತ್ತೊತ್ತಾಗಿರುವ ಮನೆಗಳು, ಮುಖ್ಯ ಬಜಾರು, ವಾರಕ್ಕೆರಡು ದಿನ ನಡೆವ ಸಂತೆ ಬಯಲು, ಊರೊಳಗೆ ಹೊಕ್ಕರೆ ಕಿಕ್ಕಿರಿದಂತಹ ಸಂದಿಗಳು. ಒಂದೊಂದು ಓಣಿಗೂ ಗುಡಿ, ಮಠ, ತೇರಿನಮನೆ, ಮಸೀದೆ, ಚರ್ಚು, ದರ್ಗಾ. ಅಂದರೆ ಜೀವಪುರ ಎಲ್ಲಾ ಧರ್ಮದ ವರ್ಗದ ಜನರನ್ನು ತನ್ನ ಮಡಿಲಲ್ಲಿಟ್ಟುಕೊಂಡು ಹಾಯಾಗಿಯೇ ಇತ್ತು.

ಜನರಾದರೂ ಜೀವಪ್ರೀತಿಯ ತಹತಹದವರು. ಪ್ರಾಮಾಣಿಕ ಶ್ರಮಜೀವಿಗಳು ಸಮಾಜಮುಖಿಯಾಗಿದ್ದ ಅವರವರ ಮನೆತನ ಉದ್ಯೋಗಗಳು, ಮನುಷ್ಯ ಸಂಬಂಧದ ಗಾಢತೆಗೂ ಜೀವದ್ರವ್ಯವೆನಿಸಿದ್ದವು. ಧರ್ಮ ಸಂಪ್ರದಾಯಗಳನ್ನು ಆಚರಿಸುತ್ತಿದ್ದರಾದರೂ, ಹೊರಗೆ ಬಂದಾಗ ಅವುಗಳ ಬಗ್ಗೆ ಜಂಭಕೊಚ್ಚಿಕೊಳ್ಳುವ, ಇತರರ ರೀತಿರಿವಾಜುಗಳನ್ನು ಹೀಯಾಳಿಸಿ ಮಾತಾಡುವ ಸಣ್ಣತನವನ್ನು ವ್ಯಕ್ತಪಡಿಸುವ ಧಾವಂತವಿರಲಿಲ್ಲ. ಅದರ ಬದಲಾಗಿ ತಮ್ಮ ಹಬ್ಬ, ಮಂಗಲ ಕಾರ್ಯಕ್ಕೆ ತಮಗೆ ಬೇಕಾದವರನ್ನು ಪ್ರೀತಿಯಿಂದ ಕರೆದು ಊಟಬಡಿಸುವರು. ಕೊಡುಕೊಳ್ಳುವ